

## ಪರದೆಯಿಂದ ಪಾಕಶಾಲೆವರೆಗೆ...

ಯೂಟ್ಯೂಬ್‌ನಲ್ಲಿ ದೊರೆತ ಮೆಚ್ಚುಗೆಯಿಂದ ಪ್ರೇರಿತರಾದ ಶರಣ್ ಚಿಲಿಂಬಿ 'ಪವರ್‌ಹೌಸ್ ಕಿಚನ್' ಕೆಫೆ ತೆರೆದಿದ್ದಾರೆ. ಮಂಗಳೂರಿನ ಹೊರವಲಯದ ಕೂಳೂರಿನಲ್ಲಿರುವ ಯೆನೆಪೋಯ ಕಾಲೇಜು ಕ್ಯಾಂಪಸ್‌ನಲ್ಲಿ ಕೆಫೆ ಮುನ್ನಡೆಯುತ್ತಿದೆ.

ತಮ್ಮದೇ ಆದ ಬ್ರ್ಯಾಂಡ್ ಸೃಷ್ಟಿಸಿಕೊಂಡಿರುವ ಶರಣ್, ಒಂದು ವರ್ಷದಲ್ಲಿ ಇನ್ನೂ ನಾಲ್ಕಾರು ಇಂತಹ ಕೆಫೆ ಪ್ರಾರಂಭಿಸುವ ಯೋಚನೆ ಇದೆ, ರಿಯಾಲಿಟಿ ಶೋವೊಂದು ರಿಯಲ್ ಉದ್ಯಮವಾಗಿ, ಕೆಲವರಿಗೆ ಉದ್ಯೋಗ ನೀಡಲು ಸಾಧ್ಯವಾದರೆ ಅದೇ ದೊಡ್ಡ ತೃಪ್ತಿ ಎನ್ನುತ್ತಾರೆ.

ಸ್ಫೂರ್ತಿಯಾಗಬೇಕು ಎಂಬ ಕಲ್ಪನೆಯಲ್ಲಿ ಶರಣ್ ಚಿಲಿಂಬಿ ಪ್ರಾರಂಭಿಸಿರುವ 'ಚಿಲ್ಲಿಂಗ್ ವಿಥ್ ಚಿಲಿಂಬಿ' ಪಾಡ್‌ಕಾಸ್ಟ್ ಸರಣಿ ಶತಕ ಬಾರಿಸಿದೆ. ಯೂಟ್ಯೂಬ್, ಫೇಸ್‌ಬುಕ್, ಸ್ಪಾಟಿಫೈ ಮೂಲಕ ಹೊರರಾಜ್ಯ, ಹೊರದೇಶಗಳಲ್ಲಿರುವ ತುಳುಭಾಷಿಕರ ಮನಗೆದ್ದಿದೆ. ಶರಣ್ ಅವರ ಈ ವಿಡಿಯೊಗಳಲ್ಲಿ ತುಳುಭಾಷೆಯ ಘಮ ಸೂಸುತ್ತದೆ.

ತುಳುನಾಡಿನ ಶ್ರೀಮಂತ ಸಾಂಸ್ಕೃತಿಕ ಪರಂಪರೆ, ನೆಲದ ಉಸಿರಾಗಿರುವ ರಂಗಭೂಮಿ, ತುಳು ನಾಟಕಗಳೇ ಈ ಎಲ್ಲ ಡಿಜಿಟಲ್ ಪ್ರಯೋಗಗಳಿಗೆ ಮೂಲ ಎಂಬುದನ್ನು ಅವರು ಸ್ಮರಿಸಿಕೊಂಡರು.

**ಅನುಭವದ ತುಣುಕುಗಳು:** ಪಾಡ್‌ಕಾಸ್ಟ್ ಸರಣಿಯ ಫಲಿತಾಂಶದ ಬಗ್ಗೆ ಕೇಳಿದಾಗ ಶರಣ್ ಅವರು ಹೇಳಿದ ಒಂದೆರಡು ಅನುಭವ ಕಥನಗಳು ಇವು.

'ಎಚ್‌ಐವಿ ಬಗ್ಗೆ ಜನರಿಗೆ ಹೇಳಲು ಮತ್ತು ಮುಕ್ತವಾಗಿ ಕೇಳಲು ಮುಜುಗರ. ಅದಕ್ಕಾಗಿ ಎಚ್‌ಐವಿ ಕುರಿತು ವೈದ್ಯರೊಬ್ಬರ ಸಂದರ್ಶನದ ಪಾಡ್‌ಕಾಸ್ಟ್ ಮಾಡಿದೆ. ಈ ಕಂತು ಲಕ್ಷಾಂತರ ಜನರನ್ನು ತಲುಪಿತು, ಅತಿ ಹೆಚ್ಚು ಪ್ರಶಂಸೆಯನ್ನೂ ಗಳಿಸಿಕೊಂಡಿತು. ಕಾಲ್ ಮಾಡಿ ಡಾಕ್ಟರ್ ನಂಬರ್ ಕೇಳಿದವರೂ ಇದ್ದಾರೆ. ಇತ್ತೀಚೆಗೆ ಆ ಡಾಕ್ಟರ್ ಮಂಗಳೂರಿನಲ್ಲಿ ಹೊಸದೊಂದು ಕ್ಲಿನಿಕ್ ಪ್ರಾರಂಭಿಸಿರುವುದನ್ನು ಕೇಳಿದೆ'.

'ಲಿಂಗತ್ವ ಅಲ್ಪಸಂಖ್ಯಾತರೊಬ್ಬರ ಸಂದರ್ಶನ ಪ್ರಸಾರವಾದ ಮೇಲೆ ಅವರ ಉಮ್ಮಳಗಳನ್ನು ಅರ್ಥೈಸಿಕೊಂಡ ಹಲವಾರು ನೋಡುಗರು 'ನಮ್ಮಲ್ಲಿ ಅರಿವು ಮೂಡಿಸಿದಿರಿ' ಎಂದು ಮೆಚ್ಚುಗೆ ಸೂಚಿಸಿದರು. ಆ ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಗೆ ಸಿನಿಮಾದಲ್ಲಿ ನಟಿಸುವ ಅವಕಾಶವೂ ದೊರೆಯಿತು'.

'ವಿಡಿಯೊ ಕಂಟೆಂಟ್ ಶುರು ಮಾಡಿದಾಗ ನನಗೆ 21 ವರ್ಷ. ಯಾವುದೇ ಫಿಲ್ಟರ್ ಇಲ್ಲದೆ ಮುಕ್ತವಾಗಿ ಮಾತನಾಡುತ್ತಿದ್ದೆ. ಒಮ್ಮೆ ಒಂದು ಜನ್ಮದಿನದ ಪಾರ್ಟಿಗೆ ಹೋದಾಗ ಸಿಕ್ಕ ಪುಟ್ಟ ಬಾಲಕನೊಬ್ಬ 'ಅಣ್ಣ ನನಗೆ ನೀನು ಮಾಡೆಲ್' ಎಂದಿದ್ದು ನನ್ನ ಮಿದುಳನ್ನು ಕುಕ್ಕಿದ ಮಾತು. ನಮ್ಮನ್ನು ಅನುಸರಿಸುವವರು, ಅನುಕರಿಸುವವರಿಗೆ ನಾವು ಮಾದರಿಯಾಗಿರಬೇಕೆಂಬ 'ಎಚ್ಚರ'ವನ್ನು ಸದಾ ಜಾಗೃತವಾಗಿಟ್ಟುಕೊಳ್ಳುತ್ತೇನೆ. ಈ ಪ್ರಜ್ಞೆ, ಸಾಮಾಜಿಕ ಜಾಲತಾಣವೆಂಬ ಸಮುದಾಯದ ಎಚ್ಚರ ಆಗಬೇಕು'. ■


ಯುಗಾದಿ ಬಂದರೆ ಪ್ರಬಂಧಗಳಿಗೆ ಸುಗ್ಗಿ ಕಾಲ

ಸುಧಾ

ಯುಗಾದಿ ವಿಶೇಷಾಂಕ-2026

ಯುಗಾದಿ ಬಂದರೆ ಪ್ರಬಂಧಗಳಿಗೆ ಸುಗ್ಗಿ ಕಾಲ. 2026ರ 'ಸುಧಾ' ಯುಗಾದಿ ವಿಶೇಷಾಂಕಕ್ಕಾಗಿ ಲಲಿತಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿದೆ. ಸೃಜನಶೀಲ ಲೇಖಕರು ತಮ್ಮ ಚಿಂತನೆಯ ಲಾಲಿತ್ಯಪೂರ್ಣ ಬರಹವನ್ನು ಕಳಿಸಬಹುದು. ವಿಷಯ, ವಸ್ತು, ನಿರೂಪಣೆಯಲ್ಲಿ ಹೊಸತನವನ್ನು ಈ ಸ್ಪರ್ಧೆ ನಿರೀಕ್ಷಿಸುತ್ತದೆ.

**ಮೊದಲನೇ ಬಹುಮಾನ: ₹20,000**

**ಎರಡನೇ ಬಹುಮಾನ: ₹15,000**

**ಮೂರನೇ ಬಹುಮಾನ: ₹10,000**

- ಪ್ರಬಂಧಗಳು 2000 ಶಬ್ದ ಮೀರದಿರಲಿ.
- ಪ್ರಬಂಧಕ್ಕೆ ನಿರ್ದಿಷ್ಟ ವಸ್ತುವಿನ ಕಟ್ಟುಪಾಡಿಲ್ಲ. ಯಾವ ವಿಷಯದ ಬಗ್ಗೆಯಾದರೂ ಪ್ರಬಂಧ ಬರೆಯಬಹುದು.
- ಸ್ಪರ್ಧೆಗೆ ಕಳುಹಿಸುವ ಪ್ರಬಂಧಗಳು ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಜಾಲತಾಣ, ಸಾಮಾಜಿಕ ಜಾಲತಾಣ ಸೇರಿದಂತೆ ಯಾವುದೇ ಮಾಧ್ಯಮದಲ್ಲಿ ಈ ಮೊದಲು ಪ್ರಕಟಗೊಂಡಿರಬಾರದು.
- ಬರಹದ ಜೊತೆಯಲ್ಲಿ ಪ್ರತ್ಯೇಕ ಹಾಳೆಯಲ್ಲಿ ವಿಳಾಸ, ದೂರವಾಣಿ ಸಂಖ್ಯೆ ಬರೆಯಿರಿ. ಜೊತೆಗೆ ನಿಮ್ಮ ಫೋಟೊ ಕೂಡ ಇರಲಿ.
- ಲಕೋಟೆ ಮೇಲೆ ಅಥವಾ ಇಮೇಲ್‌ನಲ್ಲಿ 'ಯುಗಾದಿ ಪ್ರಬಂಧ ಸ್ಪರ್ಧೆಗೆ' ಎಂದು ನಮೂದಿಸಿ.
- ಬಹುಮಾನಿತ ರಚನೆಗಳನ್ನು ಯಾವಾಗ ಬೇಕಾದರೂ ಯಾವ ಸ್ವರೂಪದಲ್ಲಾದರೂ ಬಳಸುವ ಹಕ್ಕನ್ನು 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಕಾದಿರಿಸಿಕೊಂಡಿದೆ.
- 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಸಿಬ್ಬಂದಿ ಮತ್ತು ಅವರ ಕುಟುಂಬ ವರ್ಗದವರು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.
- ನುಡಿ–ಯುನಿಕೋಡ್‌ನಲ್ಲಿ ಪ್ರಬಂಧಗಳನ್ನು ಇ–ಮೇಲ್ ಮಾಡಬಹುದು.

ಕೊನೆಯ ದಿನಾಂಕ
ಡಿಸೆಂಬರ್ 25, 2025

ವಿಳಾಸ: ಸಂಪಾದಕರು,
**ಸುಧಾ ಯುಗಾದಿ ವಿಶೇಷಾಂಕ,**
ನಂ. 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು 560001

ಇ–ಮೇಲ್: **ugadi@sudha.co.in**